For more job news visit : www.kpscvaani.com

ಹುದ್ದೆಗೆ ಅರ್ಜಿ ಆಹ್ವಾನ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಶಿರಸಿ ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ವಿವಿಧ ಕಾರಣಗಳಿಂದಾಗಿ ಖಾಲಿಯಾಗಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್: **https:/karnemakaone.kar.nic.in/abcd** ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಆನ್‌ಲೈನ್ ಮೂಲಕ ಡಿ.31 ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ತಾಲೂಕಿನಲ್ಲಿ ಖಾಲಿಯಿರುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ವಿವರ: ಕಾರವಾರ ತಾಲೂಕಿನಲ್ಲಿ ಸಹಾಯಕಿ 8, ಅಂಕೋಲಾ ಕಾರ್ಯಕರ್ತೆ 2, ಸಹಾಯಕಿ 24, ಕುಮಟಾ ಸಹಾಯಕಿ 9, ಹೊನ್ನಾವರ ಕಾರ್ಯಕರ್ತೆ 1, ಸಹಾಯಕಿ 12, ಭಟ್ಕಳ ಕಾರ್ಯಕರ್ತೆ 1, ಸಹಾಯಕಿ 16, ಶಿರಸಿ ಕಾರ್ಯಕರ್ತೆ 2, ಸಹಾಯಕಿ 39, ಸಿದ್ದಾಪುರ ಕಾರ್ಯಕರ್ತೆ 4, ಸಹಾಯಕಿ 15, ಯಲ್ಲಾಪುರ ಕಾರ್ಯಕರ್ತೆ 3, ಸಹಾಯಕಿ 25, ಮುಂಡಗೋಡ ಕಾರ್ಯಕರ್ತೆ 2, ಸಹಾಯಕಿ 16, ಹಳಿಯಾಳ ಕಾರ್ಯಕರ್ತೆ 3, ಸಹಾಯಕಿ 18, ದಾಂಡೇಲಿ ಸಹಾಯಕಿ 8, ಜೋಯಿಡಾ ಕಾರ್ಯಕರ್ತೆ 5, ಸಹಾಯಕಿ 16 ಸೇರಿದಂತೆ ಒಟ್ಟೂ ಖಾಲಿ ಇರುವ 23 ಕಾರ್ಯಕರ್ತೆಯರು ಮತ್ತು 206 ಸಹಾಯಕಿಯರ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲಾಗುತ್ತದೆ. ಮಾಹಿತಿಗೆ ಆಯಾ ತಾಲೂಕಿನ ಶಿರಸಿ ಅಭಿವೃದ್ಧಿ ಯೋಜನಾಧಿಕಾರಿಗಳ ಸಂಪರ್ಕಿಸುವಂತೆ ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.